ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 6, MAY-JUNE 2021, 7-13
©*IIMRD*, Mysuru
IIMRD JOURNALS
www.iimrd.com

# ಕಣಿಯನ್ ಸಮುದಾಯದ ಸಾಮಾಜಿಕ ವ್ಯವಸ್ಥೆ

**ಲೋಕೇಶ್ ಎಸ್[1] ಮತ್ತು ಡಾ. ಎಚ್.ಎಂ. ಮರಳುಸಿದ್ಧಯ್ಯ[2]**

**ಪೀಠಿಕೆ**

ಇಂಡಿಯಾದಲ್ಲಿ ನೆಲೆಗೊಂಡಿರುವ ವಿವಿಧ ಜಾತಿ, ಧರ್ಮ ಮತ್ತು ಜನಾಂಗಗಳು ವಿಭಿನ್ನವಾದ ಗುಣಲಕ್ಷಣ, ಸಂಸ್ಕೃತಿ ಮತ್ತು ಧಾರ್ಮಿಕ ನಂಬಿಕೆಗಳನ್ನು ಅಳವಡಿಸಿಕೊಂಡಿದ್ದು, ಒಂದು ಜಾತಿಯನ್ನು ಇನ್ನೊಂದು ಜಾತಿಗೆ ಹೋಲಿಕೆ ಮಾಡಿದಾಗ ಅವುಗಳಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಮತ್ತು ಧಾರ್ಮಿಕವಾಗಿ ವಿಭಿನ್ನವಾಗಿರುವುದನ್ನು ಕಾಣಬಹುದಾಗಿದೆ. ಪ್ರಸ್ತುತ ಲೇಖನದಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ನೆಲೆಸಿರುವ ಕಣಿಯನ್ ಸಮುದಾಯದ ಸಾಮಾಜಿಕ ವ್ಯವಸ್ಥೆಯನ್ನು ವಿವರಿಸಲಾಗಿದೆ.

ಚಾಮರಾಜನಗರ ಜಿಲ್ಲೆಯು ಕರ್ನಾಟಕದ ದಕ್ಷಿಣ ಭಾಗದಲ್ಲಿದ್ದು, 5,101 ಚ.ಕಿ.ಮೀ.ವಿಸ್ತೀರ್ಣದಲ್ಲಿ ಚಾಮರಾಜನಗರ, ಕೊಳ್ಳೆಗಾಲ, ಯಳಂದೂರು ಮತ್ತು ಗುಂಡ್ಲುಪೇಟೆ ತಾಲೂಕುಗಳನ್ನು ಒಳಗೊಂಡಿದೆ. 2011 ನೇ ಜನಗಣತಿ ಪ್ರಕಾರ 5,12,231 ಪುರುಷ ಮತ್ತು 5,08,560 ಮಹಿಳೆಯರನ್ನೊಳಗೊಂಡಂತೆ 10,20,791 ಜನಸಂಖ್ಯೆಯನ್ನು ಹೊಂದಿದೆ. ಜಿಲ್ಲೆಯ ಜನ ಸಾಂದ್ರತೆ 181 ರಷ್ಟಿದ್ದು, ಲಿಂಗಾನುಪಾತ 993 ರಷ್ಟಿದೆ. ಜಿಲ್ಲೆಯ ಸಾಕ್ಷರತೆಯನ್ನು ಗಮನಿಸಿದಾಗ ಶೇ.67.9 ರಷ್ಟಿದ್ದು, ರಾಜ್ಯದಲ್ಲಿ ಅತ್ಯಂತ ಕಡಿಮೆ ಸಾಕ್ಷರತೆಯನ್ನು ಹೊಂದಿರುವ ಜಿಲ್ಲೆಗಳಲ್ಲಿ 3ನೇ ಸ್ಥಾನವನ್ನು ಹೊಂದಿದೆ.

ಚಾಮರಾಜನಗರ ಜಿಲ್ಲೆಯಲ್ಲಿ ಕಣಿಯನ್ ಸಮುದಾಯದವರು ಚಾಮರಾಜನಗರ ತಾಲೂಕಿನ ಸೋಮವಾರಪೇಟೆ, ವೆಂಕಟಯ್ಯನ ಛತ್ರ, ಜ್ಯೋತಿಗೌಡನಪುರ, ದೊಡ್ಡರಾಯಪೇಟೆ, ರಾಮಸಮುದ್ರ, ತೆಳ್ಳನೂರು ಗ್ರಾಮಗಳಲ್ಲಿಯೂ ಹಾಗೂ ಕೊಳ್ಳೆಗಾಲ ತಾಲೂಕಿನ ಸುರಾಪುರ, ಬೆಂಡಳ್ಳಿ, ಮುಡಿಗುಂಡಂ, ಹೊಸಮಾಲಂಗಿ, ಆಲಹಳ್ಳಿ, ಚಿಕ್ಕ ಮಾಲಾಪುರ, ಕೋಡಿಪುರ, ಗುಂಡೆಗಾಲ, ಶಂಕನಪುರ, ಉದ್ದನೂರು ಗ್ರಾಮಗಳಲ್ಲಿಯೂ ಮತ್ತು ಯಳಂದೂರು ತಾಲೂಕಿನ ಪಟ್ಟಣ ಪ್ರದೇಶ, ಇರಸವಾಡಿ, ಮತ್ತು ಮದ್ದೂರು ಗ್ರಾಮಗಳಲ್ಲಿಯೂ ಹಾಗೂ ಗುಂಡ್ಲುಪೇಟೆ ತಾಲೂಕಿನ ರಾಘವಪುರದಲ್ಲಿಯೂ ಕಂಡು ಬರುತ್ತಾರೆ.

---

*[1] ಸಂಶೋಧನಾ ವಿದ್ಯಾರ್ಥಿ, ಮಾನವಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.*
*[2] ಮಾರ್ಗದರ್ಶಕರು, ಅಂತ್ರೋಪಾಲಾಜಿಕಲ್ ಸರ್ವೇ ಆಫ್ ಇಂಡಿಯಾ, ಮಾನವ ಭವನ, ಬೋಗಾದಿ, ಮೈಸೂರು*

ಕಣಿಯನ್‌ರನ್ನು ಕಣಿಯರು, ಕಣೆಯನ್, ಕನಿಯನ್, ಕಣ್ಯಾನ್, ಕಣಿಸನ್, ಕಣಿಶನ್, ಕಣಿಯರ್, ಕಣಿಯಾರ, ಕಣಿಯ, ಕನಿಯ, ಕಣಿ, ಕನಿ, ಮಗ್ಗದವರು, ತಿರುಕುರಳದಾಸ, ದಾಸರು ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಆರ್ಥಿಕ, ಸಾಮಾಜಿಕ, ರಾಜಕೀಯ, ಮತ್ತು ಶೈಕ್ಷಣಿಕ ಸ್ಥಾನಮಾನಗಳ ಆಧಾರದ ಮೇಲೆ ಎಲ್ಲಾ ಸಮುದಾಯಗಳಿಗೆ ಸಮಾನ ಪ್ರಾತಿನಿಧ್ಯತೆ ನೀಡಬೇಕೆಂಬ ಉದ್ದೇಶದಿಂದ ಜನಸಮುದಾಯಗಳನ್ನು ವಿವಿಧ ಮಾನದಂಡಗಳ ಆಧಾರದ ಮೇಲೆ ಸಾಮಾನ್ಯವರ್ಗ, ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ವರ್ಗ, ಅಲ್ಪಸಂಖ್ಯಾತ ಮುಂತಾದ ಗುಂಪುಗಳನ್ನಾಗಿ ವಿಂಗಡಿಸಿಕೊಳ್ಳಲಾಗಿದೆ. ಅದರಂತೆ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲೂಕಿನಲ್ಲಿರುವ ಇವರನ್ನು 'ಪರಿಶಿಷ್ಟ ಬುಡಕಟ್ಟು' ಎಂದು ವರ್ಗೀಕರಿಸಲಾಗಿದೆ. ಈ ತಾಲೂಕನ್ನು ಹೊರತುಪಡಿಸಿ ರಾಜ್ಯದ ಇತರ ಪ್ರದೇಶಗಳಲ್ಲಿ ವಾಸಿಸುತ್ತಿರುವ ಕಣಿಯನ್ ಸಮುದಾಯದವರನ್ನು ಹಿಂದುಳಿದ ಪಂಗಡಗಳ 2(ಎ) ಗುಂಪಿನಲ್ಲಿ ಸೇರಿಸಲಾಗಿದೆ.

**ಕಣಿಯನ್ ಸಮುದಾಯದ ಸಾಮಾಜಿಕ ವ್ಯವಸ್ಥೆ**

ದೇಶದ ಯಾವುದೇ ಒಂದು ಸಮುದಾಯದ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯ ಜೀವನ ಸ್ಥಿರವಾಗಿರದೆ ಕಾಲದಿಂದ ಕಾಲಕ್ಕೆ, ಸ್ಥಳದಿಂದ ಸ್ಥಳಕ್ಕೆ ಬದಲಾಗುತ್ತಿರುತ್ತದೆ. ಬದಲಾವಣೆ ಎಂಬುದು ನಿಸರ್ಗದ ನಿಯಮ; ಪ್ರತಿಯೊಬ್ಬ ವ್ಯಕ್ತಿ, ಸಮುದಾಯ ಅಥವಾ ಜನಾಂಗಗಳು ಪುರಾತನ ಕಾಲದಿಂದಲೂ ಬದಲಾವಣೆಗೆ ಹೊಂದಿಕೊಳ್ಳುತ್ತಾ ಬಂದಿದೆ. ಬದಲಾವಣೆಗೆ ಒಗ್ಗದ ವ್ಯಕ್ತಿ, ಸಮಾಜ ಅಥವಾ ಸಮುದಾಯ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವುದು ಕಷ್ಟಸಾಧ್ಯವಾಗುತ್ತದೆ. ಸರಳತೆಯಿಂದ ಸಂಕೀರ್ಣತೆಯೆಡೆಗೆ ಮತ್ತು ಏಕರೂಪತೆಯಿಂದ ವಿವಿಧತೆಯೆಡೆಗೆ ಸಮಾಜ ಸದಾ ಬದಲಾಗುತ್ತಿರುತ್ತದೆ. ಸಾಮಾಜಿಕ ಮತ್ತು ಆರ್ಥಿಕ ಪ್ರಕ್ರಿಯೆಗಳ ಮಾದರಿಗಳಾದ ಅಂತಕ್ರಿಯೆಗಳು ಸಂಘಟನೆಗಳಲ್ಲಿನ ವ್ಯತ್ಯಾಸ ಹಾಗೂ ಮಾರ್ಪಾಡುಗಳಲ್ಲಿನ ಬದಲಾವಣೆಗಳು ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗಳಾಗಿವೆ. ಇಂತಹ ಬದಲಾವಣೆಗೆ ಭೌತಿಕ, ಜೈವಿಕ, ತಾಂತ್ರಿಕ, ಸಾಂಸ್ಕೃತಿಕ, ಶೈಕ್ಷಣಿಕ, ಕಾನೂನುಗಳು ಹಾಗೂ ಮತ್ತಿತರ ಅಂಶಗಳು ಒಟ್ಟಿಗೆ ಅಥವಾ ಬೇರೆ–ಬೇರೆಯಾಗಿ ಪ್ರಭಾವ ಬೀರುತ್ತವೆ.

**ಕುಟುಂಬ ವ್ಯವಸ್ಥೆ**

ಸಾಮಾಜಿಕ ಸಂಘಟನೆ ಸಂಸ್ಕತಿಯ ಒಂದು ಭಾಗ, ಕುಟುಂಬ ಎಂಬುದು ಸಮಾಜದ ಕನಿಷ್ಠ ಒಂದು ಘಟಕ, ಈ ಕುಟುಂಬ ವ್ಯವಸ್ಥೆ ಅಲ್ಲಿನ ಸದ್ಯಸರುಗಳಿಂದ ರೂಪಿತವಾದುದೇ ಆಗಿರುತ್ತದೆ. ಈ ಕುಟುಂಬಗಳಿಗೆ ಆಯಾ ಸಮಾಜ ಪರಂಪರೆಯಿಂದ ರೂಢಿಸಿಕೊಂಡು ಬಂದಿರುವ

ನಿಯಮಗಳು, ನಿಷೇಧಗಳು ಮುಖ್ಯವಾಗಿ ಪಾಲಿಸಲ್ಪಡುತ್ತದೆ. ಮಾನವನು ತನ್ನ ಹಲವಾರು ಮೂಲಭೂತ ಬದುಕುಗಳನ್ನು ಈಡೇರಿಸಿಕೊಳ್ಳಲು ಅನೇಕ ಸಾಮಾಜಿಕ ಸಂಸ್ಥೆಗಳನ್ನು ರೂಪಿಸಿಕೊಂಡಿದ್ದಾನೆ. ಈ ಸಂಸ್ಥೆಗಳ ಪೈಕಿ ಕುಟುಂಬವು ಪ್ರಮುಖವಾದದು. ಮಾನವ ಸಮಾಜಕ್ಕೆ ಪ್ರಾಥಮಿಕ ಸಂಘವಾದ ಕುಟುಂಬವೇ ಮೂಲ ಆಧಾರ. ಕುಟುಂಬವು ಸಣ್ಣ ಸಮಾಜಿಕ ಸಂಸ್ಥೆಯಾಗಿದ್ದರೂ ಅದು ಮೂಲ ಸಂಸ್ಥೆ. ಸಮಾಜದ ಎಲ್ಲ ಸಂಸ್ಥೆಗಳು ಅದರ ಆಧಾರದ ಮೇಲೆಯೇ ನಿಂತಿದೆ. ಕುಟುಂಬದ ಸದಸ್ಯರೆ ಸಮಾಜದ ಇತರೇ ಸಂಸ್ಥೆಗಳ ಸದಸ್ಯರು. ಕುಟುಂಬ ಪ್ರಪಂಚ ವ್ಯಾಪಕವಾದುದು. ಕುಟುಂಬ ಇಲ್ಲದಿದ್ದರೆ ಯಾವ ಸಮಾಜವು ಅಸ್ತಿತ್ವದಲ್ಲಿರುತ್ತಿರಲಿಲ್ಲ. ಅದು ಸಮಾಜದ ಪ್ರಮುಖ ಘಟಕ.

ಕುಟುಂಬವನ್ನು ಐತಿಹಾಸಿಕ ದೃಷ್ಟಿಯಿಂದ ಗಮನಿಸಿದಾಗ, ಅದು ಕಾಲಕ್ರಮೇಣ ಸ್ವಯಾಪೂರ್ಣತೆಯನ್ನು ಪಡೆದು, ಸಾಮಾಜಿಕ ಜೀವನದ ಬೇರೆ ಬೇರೆ ಕ್ಷೇತ್ರಗಳನ್ನು ಆವರಿಸಿಕೊಂಡಿದ್ದು, ಆಧುನಿಕ ಸಮಾಜದಲ್ಲಿ ಅದರ ಪ್ರಭಾವ ಕಡಿಮೆಯಾಗುತ್ತಿದೆಯೆಂಬ ವಿಚಾರ ವ್ಯಕ್ತವಾಗುತ್ತಿದೆ. ಎಡ್ಗರ್ ಥರ್ಸ್ಟನ್ ರವರು (1909) ಕರ್ನಾಟಕದಲ್ಲಿ ಕಣಿಯನ್‌ರು ಒಂದು ಒಳಬಾಂಧವ್ಯದ ಗುಂಪಿಗೆ ಸೇರಿರುತ್ತಾರೆ. ಅನೇಕ ಕಣಿಯನ್‌ರ ಕುಟುಂಬಗಳು ವಿಭಕ್ತ ಕುಟುಂಬಗಳಾಗಿದ್ದು ಅವುಗಳಲ್ಲಿ ಕೆಲವೊಂದು ಅವಿಭಕ್ತ ಕುಟುಂಬಗಳಾಗಿ ಬೇರೆ ಬೇರೆಡೆ ನೆಲೆಸಿರುತ್ತಾರೆ. ಅವರ ಜೀವನಾವರ್ತಕ ಸಂಸ್ಕಾರಗಳು ಮತ್ತು ಆಚರಣೆಗಳು ಆಯಾಯ ಪ್ರಾಂತ್ಯದ ಸ್ಥಳೀಯ ಇತರೆ ಜಾತಿಗಳ ರೀತಿಯಲ್ಲಿರುತ್ತವೆಂದು ಥರ್ಸ್ಟನ್ ದಾಖಲಿಸಿದ್ದಾರೆ. ಕರ್ನಾಟಕದಲ್ಲಿರುವ ಕಣಿಯನ್‌ರು ಮಾತನಾಡಲು, ಓದಲು ಮತ್ತು ಬರೆಯಲು ಕನ್ನಡವನ್ನು ಬಳಸುತ್ತಾರೆ. ಕೆಲವರು ತಮಿಳು ಹಾಗೂ ಮಲೆಯಾಳಂ ಭಾಷೆಯನ್ನು ಮಾತನಾಡುತ್ತಾರೆ. ಕಣಿಯನ್‌ರಲ್ಲಿ ಸಗೋತ್ರ ವಿವಾಹ ಅಸ್ಥಿತ್ವದಲ್ಲಿರುವುದನ್ನು ಕಾಣಬಹುದಾಗಿದೆ.

ಸಾಮಾನ್ಯವಾಗಿ 'ಮೇದರ'ರ ಕುಟುಂಬದಲ್ಲಿ ಗಂಡ, ಹೆಂಡತಿ ಹಾಗೂ ಇವರ ಅವಿವಾಹಿತ ಮಕ್ಕಳಿರುತ್ತಾರೆ. ಇಂಥ ಕುಟುಂಬವನ್ನು ಅವಿಭಕ್ತ ಕುಟುಂಬ ಎಂದು ಕರೆಯುತ್ತಿದ್ದರು. ಆದರೆ ಸಮಾಜ ಬದಲಾದಂತೆಯೇ ಆಧುನಿಕತೆಯ ಪ್ರಭಾವದಿಂದ ಮತ್ತೆ ಜೀವನ ನಿರ್ವಹಣೆಯ ಫಲವಾಗಿಯೂ ಸಹ ಕುಟುಂಬಗಳಿಂದ ಕುಟುಂಬಗಳಿಗೆ ಭಿನ್ನತೆ, ಏಕತೆಯ ಬದಲಾವಣೆಯನ್ನು ಹೊಂದುತ್ತಿರುವುದನ್ನು ಕಾಣಬಹುದು. ನೆರೆಹೊರೆಯ ಸಮಾಜಗಳಂತೆ ಈ ಸಮಾಜದವರು ವಿಭಕ್ತ ಕುಟುಂಬಗಳನ್ನು ಇವರಲ್ಲಿ ಕಾಣಬಹುದು.

ಕಣಿಯನ್‌ರಲ್ಲಿ ವಿಭಕ್ತ ಕುಟುಂಬಗಳನ್ನು ಹೊಂದಿದ್ದು, ಅಲ್ಪ ಪ್ರಮಾಣದಲ್ಲಿ ಅವಿಭಕ್ತ ಕುಟುಂಬಗಳನ್ನು ಕಾಣಬಹುದಾಗಿದೆ. ಕುಟುಂಬದಲ್ಲಿ ತಂದೆ ತಾಯಿ ಮತ್ತು ಮಕ್ಕಳು ಕಂಡು ಬರುತ್ತಾರೆ. ಜೊತೆಗೆ ಅವಿವಾಹಿತ ಸೋದರರು ಮತ್ತು ಸೋದರಿಯರು ಹಾಗೂ ತಂದೆ

ತಾಯಂದಿರು ಇರುತ್ತಾರೆ. ಕುಟಂಬದಲ್ಲಿನ ಆಸ್ತಿಯು ಗಂಡು ಮಕ್ಕಳಿಗೆ ಸಮಾನವಾಗಿ ಹಂಚಿಕೆಯಾಗುತ್ತದೆ. ಕುಟುಂಬದ ಯಜಮಾನ ಬಯಸಿದರೆ ತನ್ನ ಹೆಣ್ಣುಮಕ್ಕಳಿಗೂ ಆಸ್ತಿಯಲ್ಲಿ ಪಾಲು ಕೊಡಬಹುದಾಗಿದೆ.ಆದರೆ ಅದು ಕಡ್ಡಾಯವಲ್ಲ. ಸಾಮಾಜಿಕ ಘಟಕವಾದ ಕುಟುಂಬವು ಆರ್ಥಿಕ ಮತ್ತು ಧಾರ್ಮಿಕ ಘಟಕವಾಗಿಯೂ ಕಾರ್ಯನಿರ್ವಹಿಸುತ್ತದೆ. ಆದರೂ ಇವುಗಳಲ್ಲಿ ಆರ್ಥಿಕ ಅಂಶಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುತ್ತದೆ.

**ಕಣಿಯರ ಕುಲಗಳು ಮತ್ತು ವಿವಾಹ ಪದ್ಧತಿ**

ವಿವಾಹದಲ್ಲಿ ಕುಲಗಳು ಮಹತ್ವದ ಪಾತ್ರವಹಿಸುತ್ತದೆ. ಕಣಿಯರಲ್ಲಿ ಹಲವಾರು ಕುಲಗಳಿವೆ ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಬೆಳ್ಳಿ ಕುಲ, ಭೂಮಿ ಕುಲ, ಗಾಣಿಗರ ಕುಲ, ಹೂ ಕುಲ, ಕಮ್ಮರ ಕುಲ, ಕನಿಯಾರ್ ಕುಲ, ಕರಾರ್ ಕುಲ, ಕೆಂಬಾರ ಕುಲ, ಮಲೆ ಕುಲ, ಮಣಿಯಾರ ಕುಲ, ಓಧು ಕುಲ, ರಾಮಬಾಣ ಕುಲ, ಸಾಧು ಕುಲ, ಸೂರ್ಯ ಕುಲ, ವಿಳ್ಯರ ಕುಲ, ಮಾಲಗಾರ ಕುಲ, ಅರಸು ಕುಲ, ಆಣ್ಣೆ ಕುಲ ಮುಂತಾದವು ಕಂಡು ಬರುತ್ತದೆ. ಇವರಲ್ಲಿಯೂ ಕೂಡ ಇತರರಂತೆ ಒಂದೇ ಕುಲದಲ್ಲಿ ವಿವಾಹ ಸಂಬಂಧ ಏರ್ಪಡುವುದಿಲ್ಲ. ಏಕೆಂದರೆ ಒಂದೇ ಕುಲದ ಎಲ್ಲಾ ವ್ಯಕ್ತಿಗಳು ಒಂದೇ ಪಿತೃವಂಶಕ್ಕೆ ಸೇರಿದವರಾಗಿರುತ್ತಾರೆ. ಸಾಮಾನ್ಯವಾಗಿ ಸೋದರ ಮಾವನ ಮಗ ಅಥವಾ ಸೋದರ ಮಾವನ ಮಗಳು ಮತ್ತು ಅಕ್ಕನ ಮಗಳ ನಡುವೆ ವಿವಾಹ ಏರ್ಪಡಿಸುತ್ತಾರೆ. ಹುಡುಗ–ಹುಡುಗಿಯ ಆಯ್ಕೆಯ ಮುಖ್ಯ ಮಾನದಂಡ ಜಾತಿ, ಇವರ ನಡುವೆ ಅಂತರ್ಜಾತಿ ಮಧುವೆ ಅಪರೂಪ. ಇವರು ವಿವಾಹವನ್ನು ಮಹಾಸುದಿನವೆಂದು ಭಾವಿಸುತ್ತಾರೆ. ಇವರು ಗಂಡು ಮತ್ತು ಹೆಣ್ಣಿನ ಗಣಕೂಟ ಸರಿಹೊಂದಿದರೆ ವಿವಾಹ ಏರ್ಪಡಿಸುತ್ತಾರೆ, ಇಲ್ಲವಾದರೆ ವಿವಾಹವನ್ನು ನಡೆಸುವುದಿಲ್ಲ. ಈ ಜಾತಕವನ್ನು ಕಣಿಯನ್ ಪುರೋಹಿತರ ನೆರವಿನಿಂದ ತಾಳೆ ನೋಡುತ್ತಾರೆ. ಕಣಿಯರ ಸಮುದಾಯದವರಲ್ಲಿ ಗಂಡು ಮತ್ತು ಹೆಣ್ಣು ಆಯ್ಕೆಯಾದರೆ ತಮ್ಮ ಜನಾಂಗದ ದೊಡ್ಡ ಯಜಮಾನರ ನೆರವು ಕೋರಿ ಅವರ ಮುಖಂಡತ್ವದಲ್ಲಿ ಮದುವೆಯನ್ನು ನಿಶ್ಚಿಯಿಸುತ್ತಾರೆ. ಮದುವೆಗೆ ಒಂದು ಶುಭ ದಿನವನ್ನು ಗೊತ್ತು ಮಾಡುತ್ತಾರೆ. ಹೀಗೆ ಗೊತ್ತು ಮಾಡಿದ ದಿನದಂದು ಕಣಿಯನ್‌ರ ದೊಡ್ಡ ಯಜಮಾನರ ಮುಂದಾಳತ್ವದಲ್ಲಿ ಸಾಂಪ್ರಾದಾಯಿಕವಾಗಿ ಮದುವೆಯನ್ನು ಮಾಡಿಸುತ್ತಾರೆ. (ಲೋಕೇಶ್ ಎಸ್, 2021)

**ಕಣಿಯರ ಬಂದುತ್ವ ವ್ಯವಸ್ಥೆ**

ಚಾರ್ಲ್ಸ್ ವಿನಿಕ್ ಪ್ರಕಾರ 'ರಕ್ತ ಸಂಬಂಧವು ಒಂದು ಸಾಮಾಜಿಕವಾಗಿ ಗುರ್ತಿಸಲ್ಪಟ್ಟ ಸಂಬಂಧವಾಗಿದ್ದು ಊಹೆಯ ಅಥವಾ ನಿಜವಾದ ವಂಶಾವಳಿಯಾಗಿರುತ್ತದೆ. ಮಜುಮ್‌ದಾರ್‌ರವರು "ಎಲ್ಲಾ ಸಮಾಜಗಳಲ್ಲಿ ವಿವಿಧ ಗುಂಪುಗಳಾಗಿ ವಿವಿಧ ಬಂಧನಗಳಿಂದ

ಜನರು ಒಂದು ಗೂಡುತ್ತಾರೆ, ಈ ಸಾರ್ವತ್ರಿಕ ಬಂಧನವು ಮಾನವನ ಸಹಜವಾದ ಪುನರ್ ಉತ್ಪಾದನೆ ಮೇಲೆ ಅವಲಂಬಿಸಿದೆ. ಮಕ್ಕಳನ್ನು ಪಡೆಯುವ ಆ ಬಯಕೆಯು ಎರಡು ರೀತಿಯ ಬಂಧನಗಳ ಹುಟ್ಟಿಗೆ ಕಾರಣವಾಗಿದೆ. ಮೊದಲನೆಯದು ಹೆಂಡತಿಯರ ಮತ್ತು ಅವರ ನೆಂಟರಿಷ್ಟರ ಬಂಧನ ಎರಡನೆಯದು ತಂದೆ ತಾಯಿ ಮತ್ತು ಅವರ ಮಕ್ಕಳ ಬಂಧನ. ಮೊದಲ ಬಂಧನವು ಸಾಮಾಜಿಕ ಮತ್ತು ಕಾನೂನುಬದ್ಧ ವಿವಾಹಗಳ ವ್ಯಾಖ್ಯಾನಗಳನ್ನು ಸೃಷ್ಟಿಸಿದೆ. ವಿವಾಹ ಸಂಬಂಧವುಳ್ಳ ವ್ಯಕ್ತಿಗಳ ಸೇರುವಿಕೆಯನ್ನು ಒಂದೇ ಕುಲವಾಗಿ ಇವರಲ್ಲಿ ರಕ್ತ ಸಂಬಂಧವಿರುವುದಿಲ್ಲ. ಎರಡನೆಯ ಬಂಧನದಲ್ಲಿ ರಕ್ತ ಸಂಬಂಧಗಳು ತಂದೆ ತಾಯಿ ಮತ್ತು ಅಕ್ಕ ತಂಗಿಯ ರೂಪದಲ್ಲಿದ್ದು, ಇದನ್ನು ಒಂದೇ ಕುಟುಂಬಕ್ಕೆ ಸೇರಿದ ರಸ್ತ ಸಂಬಂಧ ಎನ್ನುತ್ತಾರೆ.

ಕಣಿಯನ್‌ರು ತಮ್ಮ ಪ್ರಾಥಮಿಕ ಸಂಬಂಧಿಗಳಾದ ತಂದೆ, ತಾಯಿಯರನ್ನು 'ಅಪ್ಪ' 'ಅವ್ವ' ಅಥವ ಅಮ್ಮ ಎಂಬ ಪದಗಳಿಂದ ಸಂಭೋಧಿಸುತ್ತಾರೆ. ದ್ವಿತೀಯ ಸಂಬಂಧಿಗಳನ್ನು 'ದೊಡ್ಡ (ಹಿರಿಯರಿಗೆ) ಅಥವಾ ಚಿಕ್ಕ (ಹಿರಿಯರಿಗೆ) ಎಂಬ ಪದಗಳನ್ನು ಉಪಯೋಗಿಸುತ್ತಾರೆ. ತಂದೆಯ ಅಣ್ಣ ಅಥವಾ ತಮ್ಮ, ತಾಯಿಯ ಅಕ್ಕ ಅಥವಾ ತಂಗಿಯ ಗಂಡ, ತಂದೆಯ ಅಣ್ಣ ಅಥವಾ ತಮ್ಮನ ಹೆಂಡತಿ ಮತ್ತು ತಾಯಿಯ ಅಕ್ಕ ಅಥವಾ ತಂಗಿ ಇವರನ್ನು ದ್ವಿತೀಯ ಸಂಬಂಧಿಗಳು ಎಂದು ಕರೆಯಲಾಗುತ್ತದೆ. ಹೆಂಡತಿಯ ತಂಗಿಯ ಗಂಡನನ್ನು 'ಸಡಕ' ಎಂಬ ಪದದಿಂದ ಸಂಭೋಧಿಸುತ್ತಾರೆ. ಗಂಡ–ಹೆಂಡತಿಯ ತಂದೆ ತಾಯಿಯನ್ನು ಕ್ರಮವಾಗಿ 'ಬೀಗರು' (ಗಂಡಸಿಗೆ) ಮತ್ತು 'ಬೀಗತಿ' (ಹೆಂಗಸಿಗೆ) ಎಂದು ಸಂಭೋಧಿಸುತ್ತಾರೆ.

**ಉಡುಗೆ ಮತ್ತು ತೊಡುಗೆ**

ಮೊದಲು ಕಣಿಯನ್ ಸಮುದಾಯದವರಲ್ಲಿ ಹತ್ತಿ ಬಟ್ಟೆಯನ್ನು ಧರಿಸುವ ವಾಡಿಕೆಯಿತ್ತು. ಪುರುಷರು ಬಿಳಿ ಪಂಚೆ ಮತ್ತು ಬಿಳಿ ಅಂಗಿಯೊಂದಿಗೆ, ಶಲ್ಯ ಅಥವಾ ಶಾಲು ಧರಿಸುತ್ತಿದ್ದರು. ಹುಡುಗರು ವಿಧವಿಧ ಬಣ್ಣದ ಶರ್ಟು ಮತ್ತು ಚಡ್ಡಿ ಧರಿಸುತ್ತಿದ್ದರು. ಹತ್ತಿಯ ಸೀರೆ ಮತ್ತು ರವಿಕೆಯು ಮಹಿಳೆಯರ ದಿನನಿತ್ಯದ ಉಡುಪಾಗಿತ್ತು. ಹಾಗೆಯೇ ಲಂಗ, ದಾವಣಿಯನ್ನು ಹೆಣ್ಣುಮಕ್ಕಳು ಧರಿಸುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಪಾಲಿಯೆಸ್ಟರ್, ಟೆರಿಕಾಟನ್ ಬಟ್ಟೆಗಳ ಜೊತೆಗೆ ಸಿದ್ಧಪಡಿಸಿದ ಉಡುಪುಗಳಾದ ಟೀಶರ್ಟ್, ಬನಿಯನ್, ಜೀನ್ಸ್ ಪ್ಯಾಂಟ್ಗಳನ್ನು ಬಳಸುತ್ತಾರೆ.ಯುವತಿಯರು ಲಂಗ ದಾವಣಿಗಿಂತಲೂ ಹೆಚ್ಚಾಗಿ ಫ್ಯಾನ್ಸಿ ಸೀರೆ, ಚೂಡಿದಾರ, ಟೀಶರ್ಟ್, ಹಾಗೂ ವಿವಿಧ ಉಡುಪುಗಳನ್ನು ಉಪಯೋಗಿಸುತ್ತಿದ್ದಾರೆ. ವಿವಾಹ, ಹಬ್ಬ ಹರಿದಿನ ಹಾಗೂ ಇತರ ವಿಶೇಷ ದಿನಗಳಲ್ಲಿ ಹೊಸ ಬಟ್ಟೆಗಳನ್ನು ಧರಿಸುವುದನ್ನು ಕಾಣಬಹುದಾಗಿದೆ.

**ಆಹಾರ ಪದ್ಧತಿ**

ಕಣಿಯನ್ ಆಹಾರ ಪದ್ಧತಿಯನ್ನು ಗಮನಿಸಬಹುದಾದರೆ ಇವರಲ್ಲಿ ಬಹುಪಾಲು ಜನರು ಮಾಂಸಹಾರಿಗಳಾಗಿದ್ದು, ಕೆಲವರು ಮಾತ್ರ ಸಸ್ಯಹಾರಿಗಳಾಗಿದ್ದಾರೆ.ಇವರು ತಮ್ಮ ಆಹಾರಕ್ಕಾಗಿ ರಾಗಿ, ಜೋಳ, ಅಕ್ಕಿ ಹಾಗೂ ಧವಸ ಧಾನ್ಯಗಳನ್ನು ಬಳಸುತ್ತಾರೆ.

**ಶಿಕ್ಷಣ ಮತ್ತು ಆರ್ಥಿಕತೆ**

ಕಣಿಯನ್‌ರ ಶೈಕ್ಷಣಿಕ ಸ್ಥಿತಿಗತಿಯನ್ನು ಗಮನಿಸಿದಾಗ ಹಿಂದೆ ಇವರಲ್ಲಿ ಸಾಕ್ಷರತಾ ಪ್ರಮಾಣ ತುಂಬಾ ಕಡಿಮೆಯಿತ್ತು. ಇತ್ತೀಚೆಗೆ ಸರ್ಕಾರ ಪ್ರಯತ್ನದಿಂದಾಗಿ ಶೈಕ್ಷಣಿಕ ಕ್ಷೇತ್ರವನ್ನೊಳಗೊಂಡಂತೆ ಇತರ ಕ್ಷೇತ್ರದಲ್ಲಿಯೂ ಕೂಡ ಬದಲಾವಣೆಯನ್ನು ಕಾಣಬಹುದಾಗಿದೆ. ಕಣಿಯನ್ ಸಮುದಾಯದವರ ಮೂಲ ವೃತ್ತಿ ಭವಿಷ್ಯ (ಜ್ಯೋತಿಷ್ಯ) ಹೇಳುವುದು. ಜೊತೆಗೆ ಗಿಡಮೂಲಿಕೆ ಔಷದ ನೀಡುವುದು. ಇದಲ್ಲದೆ ಮಾಂತ್ರೀಕತೆಯನ್ನು ಕೂಡ ಮಾಡುತ್ತಿದ್ದರು.ಆದರೆ ಇತ್ತೀಚೆಗೆ ಅವರ ಮೂಲ ವೃತ್ತಿಗಳಲ್ಲಿ ಬದಲಾವಣೆಯಾಗುತ್ತಿದ್ದು, ಗ್ರಾಮೀಣ ಪ್ರದೇಶದಲ್ಲಿರುವ ಕಣಿಯನ್ ಸಮುದಾಯದವರು ವ್ಯವಸಾಯದ ಜೊತೆಗೆ ಪ್ರಾಣಿ ಸಾಕಾಣೆ, ರೇಷ್ಮೆ ಸಾಕಾಣೆ, ಕೃಷಿ, ಕೂಲಿ ಮುಂತಾದ ವೃತ್ತಿಗಳನ್ನು ಹಾಗೂ ನಗರ ಪ್ರದೇಶದಲ್ಲಿರುವವರು ಗಾರ್ಮೆಂಟ್ಸ್, ಸಂಘಟಿತ ಮತ್ತು ಅಸಂಘಟಿತ ಕಾರ್ಖಾನೆಗಳಲ್ಲಿ ದುಡಿಯುತ್ತಿದ್ದಾರೆ. ಸಮುದಾಯದ ಹಿರಿಯ ತಲೆಮಾರಿನಲ್ಲಿ ಕೆಲವರು ಇಂದಿಗೂ ಜ್ಯೋತಿಷ್ಯ ವೃತ್ತಿಯನ್ನು ಮುಂದುವರೆಸುತ್ತಿದ್ದಾರೆ. ಯುವಕರು ಬೇರೆ ಬೇರೆ ವೃತ್ತಿಗಳಲ್ಲಿ ತೊಡಗಿಕೊಂಡಿರುವುದನ್ನು ಗಮನಿಸಬಹುದಾಗಿದೆ

**ಉಪಸಂಹಾರ**

ಮೇಲಿನ ಅಂಶಗಳನ್ನು ಅವಲೋಕಿಸಿದಾಗ ಚಾಮರಾಜನಗರ ಜಿಲ್ಲೆಯ ಕಣಿಯನ್ ಸಮುದಾಯದವರ ಸಾಮಾಜಿಕ ವ್ಯವಸ್ಥೆ ಮತ್ತು ಜಿಲ್ಲೆಯಲ್ಲಿರುವ ಇತರ ಸಮುದಾಯದ ನಡುವಿನ ಸಾಮಾಜಿಕ ವ್ಯವಸ್ಥೆಯ ನಡುವೆ ಸಾಮ್ಯತೆ ಇರುವುದನ್ನು ಕಾಣಬಹುದಾಗಿದೆ. ಹಾಗೆಯೇ ವಿಶಿಷ್ಟ ಅಂಶಗಳನ್ನು ಗಮನಿಸಬಹುದಾಗಿದೆ.

**ಪರಾಮರ್ಶನ ಗ್ರಂಥಗಳು**


- ಮರಳುಸಿದ್ಧಯ್ಯ ಹೆಚ್.ಎಂ. (2010). ಪರಿವರ್ತನೆಯ ಹಾದಿಯಲ್ಲಿ ಮದ್ದೂರು ಕಾಲೋನಿಯ ಸೋಲಿಗರು. ಇಲ್ಲಿ ಸಂ. ತಾರೀಹಳ್ಳಿ ಹನುಮಂತಪ್ಪ, ಕರ್ನಾಟಕದ ಸಮುದಾಯಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ನಾಗರಾಜೇ ಅರಸು, ಜಿ.ವಿ. (1977). ಕಣಿಯರು. ಮೈಸೂರು ವಿ.ವಿ., ಮೈಸೂರು.

- ಲೋಕೇಶ್ ಎಸ್. ಮತ್ತು ಮರಳುಸಿದ್ಧಯ್ಯ ಹೆಚ್.ಎಂ. (2021). ಕಣಿಯನ್ ಸಮುದಾಯದ ಸಾಂಸ್ಕೃತಿಕ ಆಚರಣೆಗಳು. ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, ಐಐಎಂಆರ್‌ಡಿ, ಮೈಸೂರು.
- ಪಾರ್ವತಮ್ಮ. ಸಿ. (2005). ಆದಿವಾಸಿ ಸಮುದಾಯಗಳ ಬದುಕು ಬವಣೆ. ಸಿಆರ್‌ಆರ್‌ಟಿಡಿ, ಮೈಸೂರು.
- ರಾಮಚಂದ್ರರಾವ್ ತಗಡೂರು. (1936). ಕಣಿಯನ್ ಚೈತ್ರಯಾತ್ರೆ. ಗ್ರಾಮ ರಕ್ಷಣ ಸಭಾ, ತಗಡೂರು.
- ಸಿದ್ಧಲಿಂಗಯ್ಯ. (1999). ಕಣಿಯನ್ ಬಗ್ಗೆ ಕುರಿತು ಒಂದು ಚರ್ಚೆ, ಜನವಾಹಿನಿ, ಬೆಂಗಳೂರು.
- ಸುಮಿತ್ರ. ಎಂ. (2004). ಕಣಿಯನ್‌ರ ಸಂಸ್ಕೃತಿ. ಮೈತ್ರೇಯಿ ಪ್ರಕಾಶನ, ಬೆಂಗಳೂರು.
- ವಂದೇ ಮಾತರಂ ಗ್ರಾಮ ರಕ್ಷಣ ಸಭಾ ತಗಡೂರು (1925). ಕಣಿಯರ ವರ್ಣ ವ್ಯವಸ್ಥೆ. ಶ್ರೀಕೃಷ್ಣರಾಜ ವಾಣಿವಿಲಾಸ ಪ್ರೆಸ್, ಮೈಸೂರು.
- Buchanan. F. (1807). A Journey from Madras through the countries of Mysore, Canara and Malabar. Oxford University Press, New Delhi
- Buchannan. F. (1807) Ethnographic Notes a Scheduled Caste and Scheduled Tribe, Govt. of India Press, New Delhi.
- Gupta. R. (2003) Kaniyar, in *People of India*, Ed. K.S. Singh. Scheduled Tribes, Oxford University Press, New Delhi
- Thuston, E. (1909). Caste and Tribes of Southern India, Madras Govt. Press, Madras.